# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(6)ಪಿಆರ್/335/2019-10

ಆಯುಕ್ತರವರ ಕಛೇರಿ,
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 07-07-2020

## ಸುತ್ತೋಲೆ

ವಿಷಯ: ಸಾರ್ವಜನಿಕರ ಪ್ರವೇಶವನ್ನು ತಾತ್ಕಾಲಿಕವಾಗಿ ನಿಷೇಧಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 25 ಶಾಸನ 2020, ದಿ: 22-04-2020.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ಸರ್ಕಾರದ ಉಲ್ಲೇಖಿತ ಸಂಖ್ಯೆಯ ಅಧಿಸೂಚನೆಯಲ್ಲಿ ಕರ್ನಾಟಕ ಸಾಂಕ್ರಮಿಕ ರೋಗಗಳ ಅಧ್ಯಾದೇಶ, 2020ರಲ್ಲಿನ ಕಂಡಿಕೆ-4ರಲ್ಲಿ ಈ ಕೆಳಕಂಡಂತೆ ಉಲ್ಲೇಖವಾಗಿರುತ್ತದೆ.**

ಸಾಂಕ್ರಾಮಿಕ ರೋಗಕ್ಕೆ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವ ಮತ್ತು ವಿನಿಯಮಗಳನ್ನು ನಿರ್ದಿಷ್ಟಪಡಿಸುವ ಅಧಿಕಾರ:- (1) ರಾಜ್ಯ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ "ಸಾಂಕ್ರಾಮಿಕ ರೋಗದ ಆಸ್ಫೋಟನೆಯು ಕಂಡು ಬಂದಿದೆ ಅಥವಾ ಭಯಭೀತಗೊಳಿಸಿದೆ ಎಂದು ಮನದಟ್ಟಾದರೆ, ಅಂಥರೋಗದ ಆಸ್ಫೋಟನೆ ಅಥವಾ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವು ಪಾಲಿಸಬೇಕಾದ ಅಂಥ ತಾತ್ಕಾಲಿಕ ವಿನಿಯಮಗಳು ಅಥವಾ ಆದೇಶಗಳನ್ನು ನಿರ್ದಿಷ್ಟಪಡಿಸಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ಉದ್ದೇಶಕ್ಕಾಗಿ ಅವಶ್ಯವೆಂದು ಭಾವಿಸುವ ಅಂಥ ಕ್ರಮಗಳನ್ನು ಯಾವುದೇ ಸಮಯದಲ್ಲಿ ಸರ್ಕಾರವು ಕೈಗೊಳ್ಳಬಹುದು ಹಾಗೂ ಸದರಿ ಅಧಿನಿಯಮಗಳು ಅಥವಾ ಆದೇಶಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಡೆಪ್ಯೂಟಿ ಕಮಿಷನರ್ ಮತ್ತು / ಅಥವಾ ಮುನಿಸಿಪಲ್ ಕಮೀಷನರುಗಳು ಇವರಿಗೆ ಅಗತ್ಯಪಡಿಸಬಹುದು ಅಥವಾ ಅಧಿಕಾರ ನೀಡಬಹುದು ಎಂದಿರುತ್ತದೆ."

ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೋವಿಡ್-19 ನೊವೆಲ್ ಕೊರೋನಾ ವೈರಸ್ ಗಣನೀಯವಾಗಿ ಹೆಚ್ಚಳವಾಗುತ್ತಿರುವುದರಿಂದ ಮೇಲ್ಕಂಡಂತೆ ಹಿನ್ನೆಲೆಯಲ್ಲಿ ಕರ್ನಾಟಕ ಸಾಂಕ್ರಮಿಕ ರೋಗಗಳ ಅಧ್ಯಾದೇಶ, 2020ರ ಕಂಡಿಕೆ-4ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಆದ ನಾನು ದಿನಾಂಕ: 09-07-2020 ರಿಂದ ದಿನಾಂಕ: 24-07-2020ರ ವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಸಾರ್ವಜನಿಕ ಪ್ರವೇಶವನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

ಸಾರ್ವಜನಿಕರ ಅನುಕೂಲಕ್ಕಾಗಿ ಈಗಾಗಲೇ ಸಕಾಲ ಯೋಜನೆಯಡಿ / ಆನ್‌ಲೈನ್‌ನಲ್ಲಿ ಹಲವಾರು ಸೇವೆಗಳನ್ನು ಒದಗಿಸಲಾಗುತ್ತಿರುತ್ತದೆ. ಅವುಗಳನ್ನು ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಸಾರ್ವಜನಿಕರುಗಳ ತಮ್ಮ ಕುಂದುಕೊರತೆಗಳ ಬಗ್ಗೆ ಅಹವಾಲುಗಳನ್ನು ಸಲ್ಲಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರ ಕಛೇರಿಯ ದ್ವಾರದ ಬಳಿ ಇಡಲಾಗಿರುವ Drop ಬಾಕ್ಸ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ ಹಾಗೂ ಈ ಕೆಳಕಂಡಂತೆ ಸೋಷಿಯಲ್ ಮೀಡಿಯಾ / ವೆಬ್‌ಸೈಟ್ ಸಲ್ಲಿಸಬಹುದಾಗಿರುತ್ತದೆ.

1. www.bbmp.sahaya.in
2. Facebook: https://www.facebook.com/bbmp.comm1/
3. Twitter:@bbmpcomm
4. Email: contactusbbmp@gmail.com
5. what's app: 9480685700

Scanned with CamScanner

ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ: 080-22660000, 22975595 (ಕೇಂದ್ರ), 22975803 (ಪೂರ್ವ), 23561692 (ಪಶ್ಚಿಮ), 26566362 (ದಕ್ಷಿಣ), 28600954 (ರಾಜರಾಜೇಶ್ವರಿನಗರ), 25735642 (ಬೊಮ್ಮನಹಳ್ಳಿ), 28512300 (ಮಹದೇವಪುರ), 23636671 (ಯಲಹಂಕ) ಮತ್ತು 28394909 (ದಾಸರಹಳ್ಳಿ) ಗಳಿಗೆ ಕರೆ ಮಾಡಿ, ದೂರುಗಳನ್ನು ಸಲ್ಲಿಸಬಹುದಾಗಿರುತ್ತದೆ.

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.

: ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.

: ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

: ಎಲ್ಲಾ ವಿಶೇಷ ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

: ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರಿಗೆ ಹಾಗೂ ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕೋರಿದೆ.

: ಎಲ್ಲಾ ವಲಯಗಳ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.

: ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಕಳುಹಿಸಿದೆ.

: ಸಾರ್ವಜನಿಕ ಸಂಪರ್ಕಾಧಿಕಾರಿ ರವರಿಗೆ ಕಳುಹಿಸುತ್ತಾ, ಪತ್ರಿಕಾ ಪ್ರಕಟಣೆ ನೀಡಲು ಅಗತ್ಯಕ್ರಮ ಕೈಗೊಳ್ಳಲು ಸೂಚಿಸಿದೆ.

: ಕಛೇರಿ ಪ್ರತಿ

Scanned with CamScanner